239

ತಾರೀಖು 18ನೆ ನೂಹೆ ಜುಲೈ 1904. 12/7

ಅಮಾನಿ ಬೈರಸಾಗರಕೆರೆ ಶಾನುಭೋಗ ಕೃಷ್ಣಪ್ಪನೆಂಬುವನು ಕೋಲಾರ ಡಿಸ್ಟ್ರಿಕ್ಟು ಗುಡಿಬಂಡೆ ಸಬ್ ತಾಲ್ಲೂಕು ಗುಡಿಬಂಡೆ ಹೋಬಳಿ ಬೇಚರಾಕ್ ಬೋಡೇನಹಳ್ಳಿ ಗ್ರಾಮದ ಈ ಕೆಳಗೆ ವಿವರಿಸಿರುವಂತೆ 62 ಎಕರೆ, 34 ಗುಂಟೆ ಜಮೀನಿಗೆ ಆಕಾರ 61—0—0 ರೂಪಾಯಿವುಳ್ಳ ಜಮೀನನ್ನು ಸ್ವಂತ ಲಾಗವಡಿನಿಂದ ಲಬಾದಿಗೆ ತಂದುಕೊಂಡು ಹತ್ತು ವರುಷಗಳಲ್ಲಿ ಪೂರಾ ಕಂಡಾಯ ಕೊಡುವ ಪರತ್ತಿನ ಮೇಲೆ ಕ್ರಯಕ್ಕೆ ಕೊಡಿಸಬೇಕೆಂದು ದರಖಾಸ್ತು ಮಾಡಿರುತ್ತಾನೆ. ಇದಕ್ಕಿಂತ ಕಮ್ಮಿ ಸಾಲುಗಳ ಶ್ರಯಕ್ಕೂ ಮತ್ತು ಸರಕಾರಕ್ಕೆ ಫಾಯಿದೆಕರವಾಗಿಯೂ ಮಾಡುವವ್ಯಾರಾದರೂ ಇದ್ದರೆ ಈ ನೋಟೀಸು ಪ್ರಸಿದ್ಧವಾದ ತಾರೀಖು ಲಾಗಾಯತು ನೂರು ತಿಂಗಳೊಳಗಾಗಿ ಈ ಆಫೀಸಿಗೆ ದರಖಾಸ್ತುಗಳನ್ನು ಕೊಡಬಹುದು. ತಪ್ಪಿದರೆ ರೂಲ್ಸು ಅನುಸರಿಸಿ ವ್ಯವಸ್ಥೆ ಮಾಡಲ್ಪಡುತ್ತೆ.

ಸರ್ವೆ ನಂಬರು.	ಮುಟ್ಟು.		ತರಿ.		ಬಾಗಾಯತು.		ಜುಮ್ಲಾ.		ಗಿಡಗಳಾ ವಗೈರೆ.				ಅಭಿ ಪಂಚಾಯಿತಿ ದಾಖಲು ನೋಟೀಸು.
	ಜಮೀನು.	ಆಕಾರ.	ಜಮೀನು.	ಆಕಾರ.	ಜಮೀನು.	ಪ್ರಕಾರ.	ಜಮೀನು.	ಆಕಾರ.	ಸಂಖ್ಯೆ.	ಹೆಸರಿನ.	ಈಚಲುಗಿಡ ಬೆಂಬಗೆ ಗಿಡದವರೆಗೆ ಇರುವದು.	ಈಚಲು ಸೊಪ್ಪಿಗೆ ಬಂದು ಗಿಡದ ಪಕ್ಕಕ್ಕೆ ಇರುವದು.	
	ಎ. ಗು. ರೂ ಆ. ಪೈ.		ಎ. ಗು. ರೂ ಆ. ಪೈ.		ಎ. ಗು. ರೂ		ಎ. ಗು. ರೂ ಆ. ಪೈ.						ರೂ ಆ. ಪೈ.
1	22 0 19 4 0		... ...		... ...		22 0 19 0 0		32	...	4	62	4 0 0
*2	26 0 21 2 0		... ...		... ...		26 0 21 0 0		30	1	1	1	2 8 0
3	13 0 11 6 0		2 34 9 12 9		... ...		15 34 21 0 0		160	..	8	11	9 4 0
..	61 0 51 12 0		2 34 9 12 9		... ...		63 34 61 0 0		222	1	13	74	15 12 0

* ಪರಾ.—ಅಂದಾಜಾ ನಾ ಲಾಯಖಾದ 100 ಕಲ್ಲುಗಳಿವೆ.

		ಎ.	ಗು.	
ನೋಟೆ.—ಒಟ್ಟು ಜಮೀನು	...	78	35	
ಪೈಕಿ ವಜಾ ಪರಾಬು		15	1	
ಜಾತಾ ಬಾಕಿ	...	63	34	ಮೇಲ್ಕಂಡ ತಪಕೀಲ್ ಮೇರೆಗೆ.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು

ಇಸ್ತಿಹಾರ್ನವಾ—ತಾರೀಖು 5ನೆ ಜುಲೈ 1904.

ಎಡತೊರೆ ತಾಲ್ಲೂಕಿಗೆ ಸೇರಿದ ಸರ್ವಮಾನ್ಯ ದಿಡ್ಡಹಳ್ಳಿ ಗ್ರಾಮವು ಸರ್ಕಾರಕ್ಕೆ ಅವಶ್ಯಕಾದ ಬಾಕಿಗೋಸ್ಕರವಾಗಿ ಎಡತೊರೆ ತಾಲ್ಲೂಕು ಅಮಲ್ದಾರ್ರವರ ಕಚೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 20ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚಿನ ತಪಕೀಲ್ ಬಗ್ಗೆ ತಾರೀಖು 14—7—1904ನೆ ನಂಬರ್ಕಂ 2ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 434ನೆ ನಂಬರು ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ್.

ತಾರೀಖು 7ನೆ ಜುಲೈ 1904.

1904ನೆ ಇಸವಿ ಜೂನ್ ತಾರೀಖು 22ನೆ ಬುಧವಾರ ಮಧ್ಯಾಹ್ನ 2 ಘಂಟೆಯಲ್ಲಿ ಮೈಸೂರುನಲ್ಲಿ ನಡದ ಮೈಸೂರು ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು.

ಮೆ॥ ಎಂ. ಕಾಂತರಾಜೆ ಅರಸಿನವರು, ಬಿ. ಎ., ಪ್ರಸಿಡೆಂಟರು (ಗೈರ್ಹಾಜರು.)

ಹಾಜರಿದ್ದವರು.

1. ವೈಸ್ ಪ್ರೆಸಿಡೆಂಟರು ಮೆ॥ ಸಿ. ಕೃಷ್ಣರಾಯರು (ಇವರು ಪ್ರಸಿಡೆಂಟರಾಗಿದ್ದರು.)
2. ನಂಜನಗೂಡು ಡಿವೀರ್ಜ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮೆ॥ ವೈದ್ಯನಾಥಯ್ಯರವರು.
3. ಹುಣಸೂರು ಡಿವೀರ್ಜ ಅಸಿಸ್ಟೆಂಟ್ ಕಮಿಷನರ್ ಮೆ॥ ದೇವರಾಜೆ ಅರಸಿನವರು.

4. ಫೌಂಜರಾಕ್ಸ ಡಿವೀಜ್ಞ ಅಸಿಸ್ಟೆಂಟ್ ಕಮೀಷನರ ಮೆ|| ಸಿ. ವೆಂಕಟರಾಯರು.
5. ಕೃಷ್ಣರಾಜಪೇಟೆ ಡಿವೀಜ್ಞ ಅಸಿಸ್ಟೆಂಟ್ ಕಮೀಷನರ ಮೆ|| ಸುಬ್ಬಪಣ್ಣಯ್ಯನವರು.
6. ಮೈಸೂರು ಡಿವೀಜ್ಞ ಎಗ್ಜಿಕ್ಯೂಟಿವ್ ಇಂಜಿನಿಯರ್ ಮೆ" ಆರ್ಲ್ಲಚಲಂ ಮೊದಲಿಯಾರ್ರು.

(a) ತಾಲ್ಲೂಕುಗಳ ಪ್ರಜಾ ಪ್ರತಿನಿಧಿಗಳು.

ಹೆಸರು.	ತಾಲ್ಲೂಕು.	ಹೆಸರು.	ತಾಲ್ಲೂಕು.
1. ಮೆ|| ಅಂಬೈ ಅಣ್ಣಯ್ಯ ಪಂಡಿತರು,	ಮೈಸೂರು.	8. ಮೆ|| ಎಸ್. ಸುಬ್ಬರಾಯರು,	ಶ್ರೀರಂಗಪಟ್ಟಣ.
2. ,, ಸಿವೋಜೆರಾಯರು,	ಯಡತೊರೆ	9. ,, ನಾಡಿಗ ಕೃಷ್ಣಪ್ಪನವರು,	ಕೃಷ್ಣರಾಜಪೇಟೆ
3. ,, ಅಂತಪಳ್ಳಿ ಮುದ್ದೇಗೌಡರು,	ಹುಣಸೂರು.	10. ,, ಚಂದ್ರಶೇಖರಯ್ಯನವರು,	ನಾಗಮಂಗಲ.
4. ,, ಸಿದ್ದಲಿಂಗಪ್ಪನವರು,	ಗುಂಡ್ಲಪೇಟೆ.	11. ,, ವೈ. ರಾಮಣ್ಣನವರು,	ಮಂಡ್ಯ.
5. ,, ವಾಸುದೇವಯ್ಯನವರು,	ಚಾಮರಾಜನಗರ.	12. ,, ಗೋವಿಂದಪ್ಪನವರು,	ಮಳವಳ್ಳಿ.
6. ,, ಭೀಮರಾಯರು,	ನಂಜನಗೂಡು.	13. ,, ಶ್ರೀಕಂಠಶೆಟ್ಟರು,	ಫೌಂಜರಾಕ್ಸ ಸಬ್ ತಾಲ್ಲೂಕ್.
7. ,, ತಲ್ಕಾಡು ಕೃಷ್ಣರಾಯರು,	ಟಿ. ನರಸೀಪುರ.		

'ಅ' ಕ್ಲಾಜಿನ ಮೇರೆ ಇತರ ಪ್ರಜಾಪ್ರತಿ ನಿಧಿಗಳು.

1. ಮೆ|| ಎ. ರಾಮಣ್ಣನವರು, ಅಡ್ವೊಕೇಟ್ ಮತ್ತು ಜಮೀನ್ದಾರ್ರು.
2. ,, ಮಾದಪ್ಪನವರು, ಇನಾಂದಾರ್ರು.
3. ,, ಎ. ಗೋವಿಂದಾಚಾರ್ಲುರವರು, ರಿಟೈರಾದ ಎ|| ಇಂಜನಿಯರ್.
4. ,, ತಾಯೂರು ಕೃಷ್ಣರಾಯರು, ರಿಟೈರಾದ ಅಮಲ್ದಾರ್ರು.
5. ,, ಉಂಡವಾಡಿ ನರಸಿಂಗರಾಯರು, ಶ್ಯಾನುಭೋಗರು ಮತ್ತು ಜಮೀನ್ದಾರ್ರು.

ಗೈರ್ಹಾಜರಾದವರು.

1. ಮೈಸೂರು ಸಿವಿಲ್ ಸರ್ಜನ್ನರವರು.
2. ಫೌಂಜರಾಕ್ಸ ಡಿವೀಜ್ಞ ಎ|| ಇಂಜನಿಯರ್ರವರು.
3. ಮೈಸೂರು ದಕ್ಷಿಣ ಸರ್ಕಲ್ ಸ್ಕೂಲುಗಳ ಡೆಪ್ಯೂಟಿ ಇನ್ಸ್ಪೆಕ್ಟರು.
4. ಹೆಗ್ಗಡದೇವನಕೋಟೆ ತಾಲ್ಲೂಕು ಪ್ರಜಾ ಪ್ರತಿನಿಧಿ ಮೆ" ದಾಸೇಗೌಡರು.
5. 'ಅ' ಕ್ಲಾಜ್ ಮೇರೆ ಪ್ರಜಾ ಪ್ರತಿನಿಧಿ ಮೆ|| ಹನ್ನೇಅಲ್ಲಿ ಜೇಗರವರು.

I. ಈ ಕೆಳಗೆ ಕಂಡ ಗೌರ್ಮೆಂಟ್ ಪ್ರೊಸೀಡಿಂಗ್ಸಗಳು ಓದಲ್ಪಟ್ಟು ರಿಕಾರ್ಡು ಮಾಡಲ್ಪಟ್ಟವು.

(1) ಲೋಕಲ್ ಬೋರ್ಡಸ ರೂಲ್ಸು 11ನೆ ಪ್ಯಾರಾದಲ್ಲಿ ಕಂಡ ಮೇರೆ ಬಂದು ತಾಲ್ಲೂಕಿನ ಎರಡು ಅಥವಾ ಎರಡಕ್ಕೆ ಜಾಸ್ತಿಯಾದ "ಗ್ರೂಪ" ಗಳಲ್ಲಿ 50 ರೂಪಾಯಿಗೆ ಕಮ್ಮಿ ಇಲ್ಲದೆ ಕಂದಾಯ ಕೊಡುವನು ಅಂಥ ಪ್ರತಿಬಂದು ಗ್ರೂಪಿನ ಮೆಂಬರಿಗೋಸ್ಕರ ಓಟ್ ಮಾಡಬಹುದೆಂದು ಬಂದಿರುವ 19—2—1904ನೆ ಮಕ್ಕಂ 3087—94—L. F. 6603ನೆ ನಂಬರ್ ಗೌರ್ಮೆಂಟ್ ಪ್ರೊಸೀಡಿಂಗ್ಸು.

(2) 5—5—04ನೆ ಮಕ್ಕಂ 3366—75—L. F. 105—03ನೆ ನಂಬರ್ ಗೌರ್ಮೆಂಟ್ ಪ್ರೊಸೀಡಿಂಗ್ಸನಲ್ಲಿ ಕಂಡ ತಿಳುವಳಿಕೆ ಅನುಸರಿಸಿ ಸಾಲರುಜಾ ಲೆಕ್ಕಗಳನ್ನ ತಯಾರ್ಮಾಡಬೇಕೆಂದು ಬಂದ ಮೇಲ್ಕಂಡ ಪ್ರೊಸೀಡಿಂಗ್ಸು.

(3) ಹತ್ತು ವರುಷಗಳು ಆದನಂತರ ಅಮೃತಮಹಾಲ್ ಇಲಾಖೆಯ ಗೂಳಿಯು ಕೆಲಸಕ್ಕೆ ಬಾರದೆ ಹೋಗುವ ಪಕ್ಷಕ್ಕೆ ಈ ಗೂಳಿಯನ್ನ ಮಾರಿಬಿಟ್ಟು ವನಗಳಿಗೆ ಗೂಳಿ ಹಾರಿಸುವದಕ್ಕೋಸ್ಕರ ಅಮೃತಮಹಾಲ್ ಇಲಾಖೆಯಿಂದ ಹೊಸದಾಗಿ ಗೂಳಿಯನ್ನು ತೆಗದುಕೊಳ್ಳಬೇಕೆಂದು ಬಂದ 20—4—1904ನೆ ಮಕ್ಕಂ 4015—24—L. F. 32—03ನೆ ನಂಬರ್ ಗೌರ್ಮೆಂಟ್ ಪ್ರೊಸೀಡಿಂಗ್ಸು.

II. ಮಸರ್ಸ್ "ಓರ್ಸ್ ಅಂಡ್ ಕೋ" ಇಂದ ಹೊಸದಾಗಿ ಬಂದ ನೇಗಲುಗಳನ್ನ ನಂಜನಗೂಡು ಆಂಗ್ಲೋ ವರ್ನಾಕ್ಯುಲರ್ ಸ್ಕೂಲಿಗೆ ಕೇರಿರುವ ಹೊಲದಲ್ಲಿ ಉಪಯೋಗಿಶಿದ್ದರ ರಿಪೋರ್ಟಿನ ಮೇಲೆ ಬಂದ 8—2—04ನೆ ಮಕ್ಕಂ 2907—15—L. F. 85—03ನೆ ನಂಬರ್ ಗೌರ್ಮೆಂಟ್ ಪ್ರೊಶೀಡಿಂಗ್ಸನ್ನ ಓದಿ ರಿಕಾರ್ಡು ಮಾಡಲ್ಪಟ್ಟದ್ದಲ್ಲದೆ ಪ್ರತಿ ನೇಗಿಲಿನ ನಮೂನೆಯನ್ನ ಅಜಮಾಯಿಷೀಗು ಮತ್ತು ಇವುಗಳನ್ನ ಉಪಯೋಗಿಸುವಂತೆ ಜನಗಳಿಗೆ ಪ್ರೋತ್ಸಾಹ ಪಡಿಸುವದಕ್ಕು ಸಹ ತಾಲ್ಲೂಕುಗಳಿಗೆ ಸರಫರಾಜು ಮಾಡಿಸಬೇಕೆಂದು ಗೌರ್ಮೆಂಟಿಗೆ ಬರೆಯಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

III. ಇಂಡಿಯನ್ ಮೆಡಿಕಲ್ ಸರ್ವಿಸ್ J. W. W. ಸ್ಟೀರ್ಪೆನ್ಸ್ ಮತ್ತು ಲೆಪಟಿನೆಂಟ್ ಕ್ರಿಸ್ಟೋಪರ್ಸ್ ಡಾಕ್ಟರುಗಳಿಂದ ಬರೆಯಲ್ಪಟ್ಟ "Practical study of Malaria" ಎಂಬ ಬುಕ್ಕನ್ನು ಜನಗಳು ಉಪಯೋಗಿಸುವ ವಿಚಾರದಲ್ಲಿ ಬಂದ 29—3—04ನೆ ಮಕ್ಕಂ 4794—803ನೆ ನಂಬರ್ ಗೌರ್ಮೆಂಟ್ ಪ್ರೊಶೀಡಿಂಗ್ಸು ಓದಲಾಯಿತು. ಮತ್ತು ತಾಲ್ಲೂಕುಗಳಿಗೂ ಮೆಂಬರುಗಳಿಗೂ ಕಳುಹಿಸಲು ಮೇಲ್ಕಂಡ ಬುಕ್ಕಿನ ಪ್ರತಿಗಳನ್ನ ತರಿಸಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

IV. ಡಿಸ್ಟ್ರಿಕ್ಟ್ ಬೋರ್ಡಿನ ಅಭಿಪ್ರಾಯದ ಮೇಲೆ ಗೌರ್ಮೆಂಟಿನಿಂದ ಇತ್ಯರ್ಥವಾದ ಆರ್ಡರು ಬರುವ ವರಗೂ ಮನೆಗಳ ಕಿಮ್ಮತ್ತಿನ ಮೇಲೆ ವಿಲೇಜ್ ಯೂನಿರ್ಯಗಳಲ್ಲಿ ಮನೆ ಕಂದಾಯವನ್ನು ವಸೂಲ್ಮಾಡಜೇಕೆಂದು ಬಂದ 8—4—04ನೆ ಮತ್ತು ಂ 3878—85—L. F. 109—03ನೆ ನಂಬರ್ ಗೌರ್ಮೆಂಟ್ ಪ್ರೊಸಿಡಿಂಗ್ಸ್ ವಿಚಾರದಲ್ಲಿ ಹಾಲಿ ಗೌರ್ಮೆಂಟಿನಿಂದ ದಾಖಲಾಗಿರುವ ದರವು ನ್ಯಾಯವಾಗಿರುವದರಿಂದ ಈದರಲ್ಲೇ ಸಧ್ಯಕ್ಕೆ ಇರಬಹುದೆಂದು ತೀರ್ಮಾನ ಮಾಡಲ್ಪಟ್ಟಿತು.

V. ಸಂತೆ ಮತ್ತು ಜಾತ್ರೆಗಳ ಕಾಲದಲ್ಲಿ ಯೂನಿರ್ಯಗಳಲ್ಲಿ ಹಂಗಾಮಿಯಾಗಿ ಚಪ್ಪರಗಳನ್ನ ಹಾಕುವದಕ್ಕೆ ಭಂಡಿ ಮೋಟನ್ನು ಉಪಯೋಗಿಸುವದಕ್ಕು ಸಹ 1902ನೆ ಇಸವಿ ಲೋಕಲ್ ಬೋರ್ಡು ರೆಗ್ಯುಲೇಷನ್ 20 (6) & (7) ನೆ ಸೆಕ್ಷನ್‌ಗಳಲ್ಲಿ ವಿಧಿಸಿರುವ ಮೇರೆ 'ಫಿ' ನಸ್ಸೂಲ್ಮಾಡುವ ವಿಚಾರದಲ್ಲಿ ಪೈಗ್ ಮತ್ತು ಇತರ ಅನಾನುಕೂಲಗಳಿಂದ ಈ ವಿಚಾರವನ್ನ ಇತ್ಯರ್ಥ ಮಾಡುವದನ್ನ ತಾತ್ಕಾಲಕ್ಕೆ ಮನ್ನ ಮಾಡಬೇಕೆಂದು ಇತ್ಯರ್ಥ ಮಾಡಲ್ಪಟ್ಟಿತು.

VI. ಲೋಕಲ್ ಬೋರ್ಡು ರೂಲ್ಸು 22ನೆ ಪ್ಯಾರಾದಲ್ಲಿ ಕಂಡ ಅಂಶಕ್ಕೆ ಲೋಕಲ್ ಬೋರ್ಡು ವಿಸಿಟಿಂಗಿಗೆ ಬರುವ ಪೀರೋಜಗಾರ್ ಮೆಂಬರುಗಳಿಗೆ ಸಲ್ಲಬೇಕಾದ ಮೈಲೇಜನ್ನು ನಿಷ್ಕರ್ಷೆ ಮಾಡಜೇಕೆಂಬ ಸಂಗತಿಯಲ್ಲಿ ಡಿಸ್ಟ್ರಿಕ್ಟು ಬೋರ್ಡು ಮತ್ತು ತಾಲ್ಲೂಕು ಬೋರ್ಡಿನ ಮೆಂಬರುಗಳಿಗೆ ಹಾಲಿ ಇರುವ ದರದ ಮೇರೆ ಮೈಲೇಜು ಕೊಡುತ್ತಾ ಬರಬಹುದೆಂತಲೂ ತಾಲ್ಲೂಕು ಬೋರ್ಡು ಮತ್ತು ಲೋಕಲ್ ಬೋರ್ಡು ಇವುಗಳಿಗೆ ಪರಸ್ಪರ ವೆತ್ಯಾಸವಿಧೆ ಎಂಬುವದಕ್ಕೆ ಮೇಲ್ಕಂಡ ಪ್ಯಾರಾದಲ್ಲಿ ಏನೂ ಉಕ್ತವಾಗಿ ಇಲ್ಲವೆಂದು ತೀರ್ಮಾನ ಮಾಡಲ್ಪಟ್ಟಿತು.

VII. ಹಾಲಿ ತಯಾರ್ಮಾಡಿರುವ ತಖ್ತೆಯಲ್ಲಿ ಕಂಡ ಪ್ರತಿಬಂದು ಕೆಲಸಕ್ಕೆ ಶಿಡ್ಯೂಲಿನಲ್ಲಿ ಕಂಡ ದರ ಅನುಸರಿಸಿ ರೂಲ್ಸಿನ 91ನೆ ಪ್ಯಾರ ಮೇರ ಅಂದಾಜು ಮೆಂಜೂರ್ಮಾಡಬಹುದೆ ಎಂಬ ವಿಚಾರದಲ್ಲಿ ಎಗ್ಸಿಕ್ಯುಟಿವ್ ಇಂಜಿನಿಯರ್‌ರವರಿಂದ ಬಂದ ಕೇಟನ ಶಿಡ್ಯೂಲುಗಳನ್ನು ಮೆಂಬರುಗಳಿಗೆ ಕಳುಹಿಸಿ ಮುಂದಿನ ಮೀಟಿಂಗಿನಲ್ಲಿ ಈ ವಿಚಾರವನ್ನು ವ್ಯವಸ್ಥೆ ಮಾಡಬಹುದೆಂದು ತೀರ್ಮಾನವಾಯಿತು.

VIII. ಮಾಹೇಮಾಸಿಗಳು ಸಕಾಲದಲ್ಲಿ ಕಂಟ್ರೋಲರ್ ಸಾಹೇಬರಿಗೆ ಕಳುಹಿಸುವದಕ್ಕೋಸ್ಕರ ರೂಲ್ಸಿನ 121ನೆ ಪ್ಯಾರ ಮೇರೆ "Finance Committee" ಕೇರಲು ಬಂದ ಕೇಟನ್ನ ಇಡಬೇಕೆಂಬ ವಿಚಾರದಲ್ಲಿ ಪ್ರಕೃತ ಪ್ರತಿ ಮಾಹೆ 18ನೆ ತಾರೀಖನ್ನು ಗೊತ್ತು ಮಾಡಲ್ಪಟ್ಟಿತು.

IX. 7—10—03ನೆ ಮತ್ತು ಂ 1124ನೆ ನವೆಂಬರ್ ಗೌರ್ಮೆಂಟ್ ಪ್ರೊಸೀಡಿಂಗ್ಸ್ 3 (4)ನೆ ಪ್ಯಾರಾದಲ್ಲಿ ಕಂಡ ಮೇರೆ 1904ನೆ ಜುಲೈ ಗುರ್ತೇ ಲಾಗಾಯಿತು ಯೂನಿರ್ಯಗಳಾಗಿ ಮಾಡಲ್ಪಡುವ

* 1. ಸಾಲಿಗ್ರಾಮ.
2. ಮಿರ್ಲೆ.
3. ಸರಗೂರು.
4. ಕಳಲೆ.
5. ಸೋಸಲೆ.
6. ಪಾಲಹಳ್ಳಿ.
7. ಕಿಕ್ಕೇರಿ.
8. ಮದ್ದೂರು.

* ಈರೇಬಿಯಲ್ಲಿ ಕಂಡ ಮೈನರ್ ಮ್ಯೂನಿಸಿಪಾಲಿಟಿಗಳಲ್ಲಿ ಸ್ಯಾನಿಟೇರ್ಷನ್ ಕೆಸರವೆನ್ಸಿ-ಲೈಟಿಂಗ್ ಈ ಕೆಲಸಗಳಿಗೆ ಹಾಲಿ ಇರುವ ಶಿಬ್ಬಂದಿಗಳೇ ಡಿಸ್ಟ್ರಿಕ್ಟು ಬೋರ್ಡಿನವರು ಬೇರೆ ವಿಧವಾಗಿ ತೀರ್ಮಾನ ಮಾಡುವ ವರಿಗೂ ಇರಬೇಕೆಂಬ ವಿಚಾರದಲ್ಲಿ ಈಗಿನ ಶಿಬ್ಬಂದಿಗಳೆ 1904ನೆ ಸೆಪ್ಟಂಬರ್ ಆಖೈರ್ ವರಿಗೆ ಇರಬೇಕೆಂತಲೂ ಈ ಮಧ್ಯೆ ಯೂನಿರ್ಯಗಳ ಅಭಿವೃದ್ಧಿ ಮತ್ತು ನಗದಿ ಜಮಾ ಖರ್ಚು ಸ್ಥಿತಿ ವಿಷಯವನ್ನ ತಿಳಿಸಬೇಕೆಂದು ತಾಲ್ಲೂಕು ಬೋರ್ಡುಗಳಿಗೆ ಬರೆಸಬೇಕೆಂದೂ ತೀರ್ಮಾನ ಮಾಡಲ್ಪಟ್ಟಿತು.

X. ಮೇಲ್ಕೋಟೆಯಲ್ಲಿ ಬಂದು ಆಸ್ಪತ್ರೆಯನ್ನ ಇಡಬೇಕು ಅಥವಾ ಬಬ್ಬೂರು ನೇಟೀವ್ ಪಂಡಿತರಿಗಾದರು ಅಲೊವನ್ಸು ಕೊಡಬೇಕು. (2) ಫ್ರೆಂಚರಾಕ್ಸ್‌ನಲ್ಲಿ ಬಂದು ಮೊರನೇ ಕ್ಯಾಸ್ ಟ್ರಾವಲರ್ಸ್ ಬಂಗ್ಲೆಯನ್ನು ಕಟ್ಟಬೇಕು. (3) ಫ್ರೆಂಚರಾಕ್ಸ್ ಆಸ್ಪತ್ರೆಗೆ ಬಬ್ಬಳ್ಳು ಮಿಡ್‌ವೈಫನ್ನು ಕೊಡಬೇಕು. (4) ಶ್ರೀರಂಗಪಟ್ಟಣ ಮತ್ತು ಶಿವಸಮುದ್ರದ ಬಳಿ ಇರುವ ಬ್ಯಳ'ನಲ್ಲಿ ಮುಸಾಫರ ಖಾನೆಗಳನ್ನ ಕಟ್ಟಬೇಕು. (5) ಸೋಮನಹಳ್ಳಿ ಮತ್ತು ಕಟ್ಟಳ್ಳಿ 1ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಗಳನ್ನ IIನೆ ಮತ್ತು IIIನೆ ತರಗತಿಗಳಾಗಿ ಮಾಡಜೇಕೆಂತಲೂ ಸಹ ಫ್ರೆಂಚರಾಕ್ಸ್ ಡಿವಿರ್ಜ ಅಸಿಸ್ಟೆಂಟ್ ಕಮಿರ್ಷರವರ 11—6—04ನೆ ಮತ್ತು ಂ ಮೆಮೊ ವಿಚಾರದಲ್ಲಿ.

(1) ಮೇಲ್ಕೋಟೆಯಲ್ಲಿ ಬಂದು ಆಸ್ಪತ್ರೆ ಇಡುವದು ಅವಶ್ಯಕವೆಂತಲೂ ಇದಕ್ಕೆ ಬೇಕಾದ ಸ್ಥಳ ಮಾಡಜೇಕೆಂತಲೂ (2) ಜನಗಳ ಉಪಯೋಗಕ್ಕಾಗಿ ಫ್ರೆಂಚರಾಕ್ಸ್ ರೈಲ್ವೆ ಸ್ಟೇರ್ಷ ಬಳಿ ಬಂದು 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲೆ ಅವಶ್ಯಕವೆಂತಲೂ (4) ಈಗಿನ ಸಂದರ್ಭದಲ್ಲಿ ಶ್ರೀರಂಗಪಟ್ಟಣದಲ್ಲಿ ಮುಸಾಫರಖಾನ ಅವಶ್ಯಕವಿಲ್ಲವೆಂತಲೂ ಶಿವಸಮುದ್ರದ ಬ್ಯಳ'ನಲ್ಲಿ ಬಂದು ಬಳ್ಳಿ ಮುಸಾಫರಖಾನ ಬೇಕೆಂತಲೂ ಇದರ ಖರ್ಚನ್ನ ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಲು ಸಾಧ್ಯವಿಲ್ಲವಾಗಿ ಪ್ರೊವಿನ್ಶಿಯಲ್ ಫಂಡಿನಿಂದ ಕೊಡಬೇಕೆಂದು ಗೌರ್ಮೆಂಟಿಗೆ ಬರೆಯಜೇಕೆಂತಲೂ (5) ಸೋಮನಹಳ್ಳಿ ಮತ್ತು ಕಟ್ಟಳ್ಳಿ ಬಂಗ್ಲಾ ವಿಚಾರವನ್ನ ವ್ಯವಸ್ಥೆ ಮಾಡಲು ಡೆಪ್ಯೂಟಿ ಕಮಿರ್ಷರ್ ಸಾಹೇಬರಿಗೆ ವಹಿಸಜೇಕೆಂತಲೂ ತೀರ್ಮಾನ ಮಾಡಲ್ಪಟ್ಟಿತು.

XI. ಈರೇಬಿಯಲ್ಲಿ ಕಂಡ ಗ್ರಾಮಗಳಲ್ಲಿ ಮಾಹೆಯಾನ 5 ರೂಪಾಯಿ

1. ಬೂಕಿನಕೆರೆ.
2. ಸಾಧಘಟ್ಟ.
3. ಕನ್ನಂಬಾಡಿ.
4. ಆಕ್ಕಿಹೆಬ್ಬಾಳು.
5. ಹೊಸಹೊಳಲು.

ತಲಬಿನ ಮೇಲೆ ಜಾಡಮಾಲಿಗಳನ್ನು ಇಡಬೇಕೆಂದು ಬಂದ ಕೃಷ್ಣರಾಜಪೇಟೆ ತಾಲ್ಲೂಕು ಬೋರ್ಡಿನ ಪ್ರೊಸೀಡಿಂಗ್ಸಿನ ವಿಚಾರದಲ್ಲಿ ಈ ಸಂಗತಿಯನ್ನು ಈಗ ನಡೆಯುತ್ತಿರುವ ಯೋಚನೆಗೆ ತರತಕ್ಕದ್ದಲ್ಲವೆಂದು ತೀರ್ಮಾನ ಮಾಡಲ್ಪಟ್ಟಿತು.

XII. ದೊಡ್ಡಿಗೆ ಕೂಡುವ ದನಕರುಗಳನ್ನ ಕಾವಲಗಾರು ಈಗಲಗಿಂತಲೂ ಹಚ್ಚಾಗಿ ನಿಗಾವಣೆ ಮಾಡಬೇಕೆಂತಲೂ ಅವ್ರಾಳನ್ನ ಹೀನಕ್ರಮಸಕ್ಕೆ ಕೊಡಕೂಡದೆಂತಲೂ 1903ನೆ ಇಸವಿ ವ್ರಜಾ ಪ್ರತಿನಿಧಿ ಸಭೆಯ 67ನೆ ವಿಷಯದಲ್ಲಿ "Cattle Tresspass Regulation" ನಲ್ಲಿ ಈ ಭಾಗಕ್ಕೆ ತಕ್ಕ ಏರ್ಪಾಟು ವಿಧಿಸಿರುತ್ತೆಂದು ರಿಕಾರ್ಡು ಮಾಡಲ್ಪಟ್ಟಿತು.

XIII. ಮುಂದೆ ಬರುವ ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಮೆ" ಅಂಬ್ಳೆ ಅಣ್ಣಯ್ಯಾಪಂಡಿತರನ್ನ ಮತ್ತು ಅಡ್ವೋಕೇಟ್ ರಾಮಣ್ಣನವರನ್ನ ಸಹ ಮೆಂಬರುಗಳಾಗಿ ನಾನ್ ಆಫಿಷಿಯಲ್ ಮೆಂಬರುಗಳು ಚುನಾಯಿಸಿದರು.

XIV. ತಾಲ್ಲೂಕಿನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳಿಗೆ ಆಯಾಯ ತಾಲ್ಲೂಕು ಬೋರ್ಡಿನ ಪ್ರೊಸೀಡಿಂಗ್ಸ್ ಕಾಪಿಯನ್ನ ಕೊಡುವಂತೆ ಮಾಡಬೇಕೆಂದು ಮೆ" ಅಂಬ್ಳೆ ಅಣ್ಣಯ್ಯ ಪಂಡಿತರು ಸಲಹೆ ಕೊಟ್ಟಿದ್ದರ ಮೇಲೆ ಈರೀತಿ ಮಾಡಲು ತಾಲ್ಲೂಕು ಬೋರ್ಡು ವೈಸ್ ಪ್ರೆಸಿಡೆಂಟರಿಗೆ ಬರೆಯಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

XV. ಮೆ" ಬಾಷಾವಿ ಭೀಮರಾಯರು ಕೊಟ್ಟ ಈ ಕೆಳಗೆ ಕಂಡ ಸಲಹೆಗಳು ಚರ್ಚೆ ಮಾಡಲ್ಪಟ್ಟವ್ವೆ :—

(i) ನಂಜನಗೂಡು ತಾಲ್ಲೂಕು ಪುರಾ ರಸ್ತೆಯನ್ನ ರಿಪೇರಿ ಮಾಡಬೇಕಲ್ಲದೆ ಕಡಿಯಾಲದ ವರಿಗೆ ಬಿಡಾಯಿಸಬೇಕು.

(ii) ಸಾಲವರಿಗಳ ಸುತ್ತವುತ್ತಲು 8 ಅಡಿ ಎಳಗೆ ಗ್ಯಾವಲ ಗುಂಡಿಗಳನ್ನ ತೆಗಿಯುವಂತೆ ಇಂಜಿನಿಯರ್ ಇಲಾಖೆಗೆ ಬರೆಸಬೇಕು.

(iii) ಒಣಗಿದ ಮರಗಳನ್ನ ಕರಾಜು ಮಾಡುವದರಿಂದ ಉತ್ಪತ್ತಿಯಾದ ಹೊಲಗನ್ನ ಫಾರೆಸ್ಟು ರಿವಿನ್ಯೂಗೆ ಬದಲಾಗಿ ಡಿಸ್ಟ್ರಿಕ್ಟ್ ಫಂಡಿಗೆ ಜಮಾ ಕಟ್ಟಿಸಬೇಕು. ಈ ಪೈಕಿ ಮೊದಲನೇ ಪ್ರಶ್ನೆ ವಿಚಾರಕ್ಕೆ ರಿಪೋರ್ಟು ಮಾಡಲು ತಾಲ್ಲೂಕಿಗೆ ಬರೆಸಬೇಕೆಂತಲೂ 2ನೆ ಪ್ರಶ್ನೆ ವಿಷಯದಲ್ಲಿ ಅಂಥಾ ಸಂದರ್ಭ ಬಿದ್ದಾಗ ಬೋರ್ಡಿನ ನೋಟೀಸಿಗೆ ತರಬೇಕೆಂತಲೂ ಮೂರನೇ ವಿಷಯದಲ್ಲಿ ಹಾಲಿ ಇರುವ ರೂಲ್ಸು ಸ್ಪಷ್ಟವಾಗಿಯೂ ಸಾಕಾಗಿಯೂ ಇರುತ್ತವೆಂತೆ ತೀರ್ಮಾನ ಮಾಡಲ್ಪಟ್ಟಿತು.

XVI. ಮೆ" ನಾಡಿಗ ಕೃಷ್ಣಪ್ಪನವರು ಪ್ರಪೋಜ್ ಮಾಡಿದ—(1) ಕೃಷ್ಣರಾಜಪೇಟೆಯಲ್ಲಿ ಒಂದು ಮುನಾಫರಖಾನೆಯನ್ನ ಕಟ್ಟಬೇಕೆಂಬ ವಿಚಾರದಲ್ಲಿ, ಮುನಾಫರಖಾನೆಗೆ ಬದಲಾಗಿ ಹಾಲಿ ಇರುವ ಛತ್ರವನ್ನೇ ರಿಪೇರಿ ಮಾಡಬೇಕೆಂದು ಮುಜರಾಯಿ ಇಲಾಖೆಗೆ ಬರೆಯಬೇಕೆಂತಲೂ (2) ಕೃಷ್ಣರಾಜಪೇಟೆ ಕೆರೆ ಏರಿ ಕೆಳಗೆ ಇರುವ ಕೊಳವನ್ನ ರಿಪೇರಿ ಮಾಡಬೇಕು. (3 ಕೃಷ್ಣರಾಜಪೇಟೆ ಅಕ್ಕಿಹೆಬ್ಬಾಳು ರಸ್ತೆಯ ರಿಪೇರಿಗಾಗಿ ಸಾಲಿಯಾನ ರಿಪೇರಿಗಾಗಿ ಕೊಡುವ ಮೊಬಲಗನ್ನ ರಸ್ತೆಯನ್ನ 2—3 ಮೈಲಿ ವರಿಗೂ ಪ್ರತಿಯಾಗಿ ರಿಪೇರಿ ಮಾಡಲು ಉಪಯೋಗಿಸಬೇಕೆಂಬ ಇವೆರಡು ವಿಷಯಗಳಿಗೆ ತಕ್ಕ ಕ್ರಮ ನಡಿಸಲು ತಾಲ್ಲೂಕು ಬೋರ್ಡಿಗೆ ಬರೆಯಬೇಕೆಂತಲೂ ಸಹ ತೀರ್ಮಾನ ಮಾಡಲ್ಪಟ್ಟಿತು.

XVII. ಸಂತೆಮರಹಳ್ಳಿ ಮಾರ್ಕೆಟ್ ಸರಹದ್ದಿನಲ್ಲಿ ಬಸವನಗುಡಿಯಲ್ಲಿ ಇರುವ ಹಳ್ಳವನ್ನ ಮುಚ್ಚಿಸಬೇಕೆಂತಲೂ, ಚಾಮರಾಜನಗರದ ತಾಲ್ಲೂಕು ಪೂರ್ವಕ್ಕೆ ಕೆಲವು ರಸ್ತೆಗಳನ್ನ ಮಾಡಬೇಕೆಂತಲೂ ಡಿಪ್ಪೆಟ್ ಗ್ರಾಂಟಿನ ಅರ್ಧವನ್ನ ಜರೂರ್‌ಯಾತಿ ಕೆಲಸಕ್ಕೆ ಅವಾಲ್ದಾರ್‌ರು ವೆಚ್ಚಮಾಡಲು ಅಪ್ಪಣೆ ಕೊಡಬೇಕೆಂತಲೂ ಸಹ ಪ್ರಪೋಜ್ ಮಾಡಿದ್ದರ ಮೇಲೆ 1—2ನೆ ಪ್ರಶ್ನೆಗಳನ್ನ ತಾಲ್ಲೂಕು ಬೋರ್ಡಿಗೆ ರಿಫರ್ ಮಾಡಬೇಕೆಂತಲೂ, ಮೂರನೇ ಸಂಗತಿಗೆ ಹಾಲಿ ಇರುವ ರೂಲ್ಸುಗಳೆ ಸಾಕಾಗಿದ್ದಯಂತಲೂ ತೀರ್ಮಾನ ಮಾಡಲ್ಪಟ್ಟವ್ವೆ.

XIX. ಮುಂದಿನ ಬೋರ್ಡಿನ ವಿಷಿಟಿಂಗನ್ನ 1904ನೆ ಜುಲೈ ಮಾಹೆ 30ನೆ ತಾರೀಖು ಬುಧವಾರ ಮಾಡಬೇಕೆಂತಲೂ ಆ ಮಾಹೆ 15ನೆ ತಾರೀಖು ಒಳಗಾಗಿ ಮೆಂಬರುಗಳು ಪ್ರಪೋಜಲ್‌ಗಳನ್ನ ಕಳುಹಿಸಬೇಕೆಂತಲೂ ಸಹ ತೀರ್ಮಾನ ಮಾಡಲ್ಪಟ್ಟಿತು.

XX. ಗೈರಹಾಜರಾದ ಮೆಂಬರುಗಳಿಗೆ ಪೈಕಿ ಸೆಷನ್ ಕೋರ್ಟಿನಲ್ಲಿ ಕೆಲಸವಿತ್ತೆಂದು ಸ್ಕೂಲಿನ ಡೆಪ್ಯುಟಿ ಇನ್‌ಸ್ಪೆಕ್ಟರು ಸಮಜಾಯಿಷಿ ಕೊಟ್ಟಿರುತ್ತಾರೆ. ಇತರ ಮೆಂಬರುಗಳು ಈ ಭಾಗದಲ್ಲಿ ಸಮಜಾಯಿಷಿ ಕೊಟ್ಟಿಲ್ಲಾ.

ಸಿ. ಕೃಷ್ಣರಾವ್,
ಫಾರ್ ಪ್ರೆಸಿಡೆಂಟ್.

ಬೆಂಗಳೂರು ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ॥ 1904—1905ನೆ ಇಸವಿ ಆರ್ಜೀ ನಂಬರ್ 8.

ವ್ಯತಪಟ್ಟೆ ಮೇಸ್ತ್ರಿ ಧನಾಜಿರಾಯರೆಂಬುವರ ಆಸ್ತಿ ವಿಷಯದಲ್ಲಿ —

ಅರ್ಜೀದಾರರು ಬೆಂಗಳೂರು ದಂಡು ಸೊಳೆಯಲ್ಲಿರುವ 1ನೆ ಸಂಬ್ಬರಾವು, 2ನೆ ಸಂತೂಜಿರಾವು, ವ್ಯತಪಟ್ಟೆ ಸದರೀ ಮೇಸ್ತ್ರಿ ಧನಾಜಿರಾಯರಿಗೆ ಸಕ್ಕಸೀದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಬಸವನಗುಡಿ ಎಕ್ಸ್ಟೆಷನ್ ನಾಸಸ್ಥರಾಗಿ ವ್ಯತಪಟ್ಟೆ ಮೇಸ್ತ್ರಿ ಧನಾಜಿರಾಯರ ಜೀವದಗಿ ಒರತಕ್ಕ ಸಾಲವನ್ನ ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟು ಬಗ್ಗೆ ಈ ಕೋರ್ಟಿಗೆ ಪಿಟಿಷನ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಸುಬ್ಬರಾವು, 2ನೆ ಸಂತೂಜಿರಾಯರ ಅರ್ಜಿಯನ್ನು ಸ॥ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು ಗುರ್ತು ಕೇಳಿ ಸರ್ಟಿಫಿಕೇಟು ಕಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟೆ ಮೇಸ್ತ್ರಿ ಧನಾಜಿರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1904ನೆ ಇಸವಿ ಜುಲೈ 23ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.